**ನಿವಾಸಿ ವಿದೇಶೀ ಕರೆನ್ಸಿ (ದೇಶೀಯ) ಖಾತೆ–ನಿವಾಸಿ ವ್ಯಕ್ತಿಗಳಿಗೆ ಸೌಲಭ್ಯಗಳು**
**ಎ.ಪಿ. (ಡಿಐಆರ್ ಶ್ರೇಣಿ) ಸುತ್ತೋಲೆ ಸಂಖ್ಯೆ 53 (ನವೆಂಬರ್ 23, 2002)**
**ಭಾರತೀಯ ರಿಸರ್ವ್ ಬ್ಯಾಂಕು**
**ವಿನಿಮಯ ನಿಯಂತ್ರಣ ಇಲಾಖೆ**
**ಕೇಂದ್ರ ಕಚೇರಿ,**
**ಮುಂಬೈ–400001.**

ಎ.ಪಿ. (ಡಿಐಆರ್ ಶ್ರೇಣಿ) ಸುತ್ತೋಲೆ ಸಂಖ್ಯೆ–53 ನವೆಂಬರ್ 23, 2002

ಗೆ,
ವಿದೇಶೀ ವಿನಿಮಯ ವ್ಯವಹಾರದಲ್ಲಿ ತೊಡಗಿರುವ ಎಲ್ಲ ಅಧಿಕೃತ ವ್ಯಾಪಾರಿಗಳಿಗೆ

ಮಾನ್ಯರೇ

**ನಿವಾಸಿ ವಿದೇಶೀ ಕರೆನ್ಸಿ (ದೇಶೀಯ) ಖಾತೆ–**
**ನಿವಾಸಿ ವ್ಯಕ್ತಿಗಳಿಗೆ ಸೌಲಭ್ಯಗಳು**

ನವೆಂಬರ್ 1, 2002 ನೇ ದಿನಾಂಕದ ಎ.ಪಿ. (ಡಿಐಆರ್ ಶ್ರೇಣಿ) ಸುತ್ತೋಲೆ ಸಂಖ್ಯೆ 37ರ ಕಡೆಗೆ ಅಧಿಕೃತ ವ್ಯಾಪಾರಿಗಳ ಗಮನವನ್ನು ಸೆಳೆಯಲಾಗಿದೆ. ಅದರ ಅನ್ವಯ, ಸರ್ಕಾರದಿಂದ ಅಧಿಸೂಚನೆ ಪ್ರಕಟಗೊಳ್ಳುವ ನಿರೀಕ್ಷೆಯಲ್ಲಿ, ನಿವಾಸಿ ವಿದೇಶೀ ಹಣ (ದೇಶೀಯ) ಖಾತೆಗಳನ್ನು ತೆರೆಯುವುದಕ್ಕಾಗಿ ತಮಗೆ ಸಲ್ಲಿಸಲಾದ ಮನವಿಗಳನ್ನು ಅವರು ತಮ್ಮ ಶಿಫಾರಸುಗಳೊಂದಿಗೆ ಭಾರತೀಯ ರಿಸರ್ವ್ ಬ್ಯಾಂಕ್‌ನ ಪ್ರಾದೇಶಿಕ ಕಚೇರಿಗೆ ರವಾನಿಸಬೇಕಾಗುತದೆ.

2. ಕರೆನ್ಸಿ ನೋಟುಗಳು, ಬ್ಯಾಂಕ್ ನೋಟುಗಳು ಮತ್ತು ಟ್ರ್ಯಾವಲರ್ಸ್ ಚೆಕ್‌ಗಳ ರೂಪದಲ್ಲಿ ಗಳಿಸಿದ ವಿದೇಶೀ ವಿನಿಮಯದಿಂದ ನಿವಾಸಿ ವಿದೇಶೀ ಕರೆನ್ಸಿ (ದೇಶೀಯ) ಖಾತೆ ಎಂಬ ಒಂದು ವಿದೇಶೀ ಕರೆನ್ಸಿ ಖಾತೆಯನ್ನು ಭಾರತದಲ್ಲಿನ ಅಧಿಕೃತ ವ್ಯಾಪಾರಿಯ ಬಳಿ ತೆರೆಯಲು, ಹೊಂದಿರಲು ಮತ್ತು ನಿರ್ವಹಿಸಲು ಭಾರತದಲ್ಲಿ ನಿವಾಸಿಯಾಗಿರುವ ಒಬ್ಬ ವ್ಯಕಿಗೆ ನೀಡುವ ಅದರ ಅಧಿಸೂಚನೆ ಸಂಖ್ಯೆ. ಎಫ್‌ಇಎಂಎ 10/2000–ಆರ್‌ಬಿ ದಿನಾಂಕ ಮೇ 3, 2000 ಇದನ್ನು ತಿದ್ದುಪಡಿ ಮಾಡಿ ಅವಕಾಶ ಭಾರತೀಯ ರಿಸರ್ವ್ ಬ್ಯಾಂಕ್ ಮೇ 3, 2000 ನೇ ದಿನಾಂಕದ ತನ್ನ ಎಫ್‌ಇಎಂಎ.74/2002–ಆರ್‌ಬಿ ಸಂಖ್ಯೆಯ ಅಧಿಸೂಚನೆಯನ್ನು ಹೊರಡಿಸಿದೆ (ಪ್ರತಿಯನ್ನು ಲಗತ್ತಿಸಿದೆ).

3. ಅದರಂತೆ, ಮೇಲೆ ಉಲ್ಲೇಖಿಸಿದ ಅಧಿಸೂಚನೆ ಮತ್ತು ಎ.ಪಿ. (ಡಿಐಆರ್ ಶ್ರೇಣಿ) ಸುತ್ತೋಲೆ ಸಂಖ್ಯೆ–37ರಲ್ಲಿ ಗೊತ್ತುಪಡಿಸಿರುವ ನಿಬಂಧನೆಗಳನ್ನು ಮತ್ತು ಷರತ್ತುಗಳನ್ನು ಪಾಲಿಸುವುದಕ್ಕೆ ಒಳಪಟ್ಟು ಭಾರತದಲ್ಲಿ ನಿವಾಸಿಯಾಗಿರುವ ಒಬ್ಬ ವ್ಯಕ್ತಿಗಾಗಿ ಅಧಿಕೃತ ವ್ಯಾಪಾರಿಗಳು ಅಂಥ ಒಂದು ಖಾತೆಯನ್ನು ತೆರೆಯುವುದು, ಹೊಂದಿರುವುದು ಮತ್ತು ನಿರ್ವಹಿಸುವುದು ಕ್ರಮಬದ್ಧವಾಗಿರುತ್ತದೆ.

4. ನವೆಂಬರ್ 1, 2002 ನೇ ದಿನಾಂಕದ ಎಫ್‌ಇಎಂಎ.74/2002–ಆರ್‌ಬಿ ಸಂಖ್ಯೆಯ ಅಧಿಸೂಚನೆಯಲ್ಲಿ ಸೂಚಿಸಿರುವಂತೆ ಮೇ 3, 2000 ನೇ ದಿನಾಂಕದ ಎಫ್‌ಇಎಂಎ.10/2000–ಆರ್‌ಬಿ ಸಂಖ್ಯೆಯ ಅಧಿಸೂಚನೆಯಲ್ಲಿ ಅಗತ್ಯ ತಿದ್ದುಪಡಿಗಳನ್ನು ಮಾಡತಕ್ಕದ್ದು.

5. ಅಧಿಕೃತ ವ್ಯಾಪಾರಿಗಳು ಸುತ್ತೋಲೆಯ ಅಂಶಗಳನ್ನು ತಮ್ಮ ಸಂಬಂಧಪಟ್ಟ ಘಟಕಗಳ ಗಮನಕ್ಕೆ ತರತಕ್ಕದ್ದು.

6. ಈ ಸುತ್ತೋಲೆಯಲ್ಲಿ ಅಡಕವಾಗಿರುವ ನಿರ್ದೇಶನಗಳನ್ನು ವಿದೇಶೀ ವಿನಿಮಯ ನಿರ್ವಹಣಾ ಅಧಿನಿಯಮ, 1999 (1999ರ 42) ರ ಪ್ರಕರಣ 10(4) ಮತ್ತು ಪ್ರಕರಣ 11(1)ರ ಮೇರೆಗೆ ನೀಡಲಾಗಿದೆ.

ತಮ್ಮ ವಿಶ್ವಾಸಿ,

ಗ್ರೇಸ್ ಕೋಶಿಯೆ
ಮುಖ್ಯ ಪ್ರಧಾನ ವ್ಯವಸ್ಥಾಪಕ.

**ಭಾರತೀಯ ರಿಸರ್ವ್ ಬ್ಯಾಂಕ್**
**ವಿದೇಶೀ ವಿನಿಮಯ ನಿಯಂತ್ರಣ ಇಲಾಖೆ**
**ಕೇಂದ್ರ ಕಚೇರಿ**
**ಮುಂಬೈ**

ಅಧಿಸೂಚನೆ ಸಂಖ್ಯೆ : ಎಫ್‌ಇಎಂಎ. 74/2002–ಆರ್‌ಬಿ ದಿನಾಂಕ: ನವೆಂಬರ್ 1, 2002

**ವಿದೇಶೀ ವಿನಿಮಯ ನಿರ್ವಹಣಾ (ಭಾರತದಲ್ಲಿ ನಿವಾಸಿಯಾಗಿರುವ ಒಬ್ಬ ವ್ಯಕ್ತಿಯಿಂದ ವಿದೇಶೀ ಕರೆನ್ಸಿ ಖಾತೆಗಳು) (ತಿದ್ದುಪಡಿ) ವಿನಿಯಮಗಳು, 2002**

ವಿದೇಶೀ ವಿನಿಮಯ ನಿರ್ವಹಣಾ ಅಧಿನಿಯಮ, 1999ರ (1999ರ 42) 9ನೇ ಪ್ರಕರಣದ (ಬಿ) ಖಂಡದ ಮತ್ತು 47ನೇ ಪ್ರಕರಣದ (2) ನೇ ಉಪ ಪ್ರಕರಣದ (ಇ) ಖಂಡದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಮತ್ತು ಮೇ 3, 2000 ನೇ ದಿನಾಂಕದ ತನ್ನ ಅಧಿಸೂಚನೆ ಸಂಖ್ಯೆ ಎಫ್‌ಇಎಂಎ 10/2000–ಆರ್‌ಬಿಯನ್ನು ಭಾಗಶಃ ಮಾರ್ಪಾಡು ಮಾಡಿ, ಭಾರತೀಯ ರಿಸರ್ವ್ ಬ್ಯಾಂಕು ವಿದೇಶೀ ವಿನಿಮಯ ನಿರ್ವಹಣಾ (ಭಾರತದಲ್ಲಿ ನಿವಾಸಿಯಾಗಿರುವ ಒಬ್ಬ ವ್ಯಕ್ತಿಯಿಂದ ವಿದೇಶೀ ಕರೆನ್ಸಿ ಖಾತೆಗಳು) ವಿನಿಯಮಗಳು, 2000 ದಲ್ಲಿ ಈ ಮುಂದಿನ ತಿದ್ದುಪಡಿಗಳನ್ನು ಮಾಡುತ್ತದೆ, ಅಂದರೆ:–

**1. ಚಿಕ್ಕ ಹೆಸರು ಮತ್ತು ಪ್ರಾರಂಭ:**

(ಎ) ಈ ವಿನಿಯಮಗಳನ್ನು ವಿದೇಶೀ ವಿನಿಮಯ ನಿರ್ವಹಣಾ (ಭಾರತದಲ್ಲಿ ನಿವಾಸಿಯಾಗಿರುವ ಒಬ್ಬ ವ್ಯಕ್ತಿಯಿಂದ ವಿದೇಶೀ ಕರೆನ್ಸಿ ಖಾತೆಗಳು) (ಐದನೆಯ ತಿದ್ದುಪಡಿ) ವಿನಿಯಮಗಳು, 2002 ಎಂದು ಕರೆಯತಕ್ಕದ್ದು.

(ಬಿ) ಈ ವಿನಿಯಮಗಳು ಅಧಿಕೃತ ರಾಜಪತ್ರದಲ್ಲಿ ಅವುಗಳನ್ನು ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. ವಿನಿಯಮಗಳ ತಿದ್ದುಪಡಿ**

ವಿದೇಶೀ ವಿನಿಮಯ ನಿರ್ವಹಣಾ (ಭಾರತದಲ್ಲಿ ನಿವಾಸಿಯಾಗಿರುವ ಒಬ್ಬ ವ್ಯಕ್ತಿಯಿಂದ ವಿದೇಶೀ ಕರೆನ್ಸಿ ಖಾತೆಗಳು) ವಿನಿಯಮಗಳು, 2000 ದಲ್ಲಿ 5ನೇ ವಿನಿಯಮದ ನಂತರ ಈ ಮುಂದಿನ ವಿನಿಯಮವನ್ನು ಸೇರಿಸತಕ್ಕದ್ದು, ಅಂದರೆ:–

" 5ಎ. ನಿವಾಸಿ ವಿದೇಶೀ ಕರೆನ್ಸಿ (ದೇಶೀಯ) ಖಾತೆಯನ್ನು ತೆರೆಯುವುದು, ಹೊಂದಿರುವುದು ಮತ್ತು ನಿರ್ವಹಿಸುವುದು.

(1) ಭಾರತದಲ್ಲಿ ನಿವಾಸಿಯಾಗಿರುವ ಒಬ್ಬ ವ್ಯಕ್ತಿಯು, ಭಾರತದಲ್ಲಿರುವ ಒಬ್ಬ ಅಧಿಕೃತ ವ್ಯಾಪಾರಿಯ ಬಳಿ

(ಎ) ಭಾರತದ ಹೊರಗಿನ ಯಾವುದೇ ಸ್ಥಳಕ್ಕೆ ಭೇಟಿ ನೀಡಿರುವಾಗ ಭಾರತದಲ್ಲಿನ ಯಾವುದೇ ವ್ಯಾಪಾರದಿಂದ ಅಥವಾ ಭಾರತದಲ್ಲಿ ಮಾಡಿದ ಕಾರ್ಯದಿಂದ ಉದ್ಭವಿಸದ ಸೇವೆಗಳಿಗೆ ಹಣ ಸಂದಾಯದ ರೂಪದಲ್ಲಿ; ಅಥವಾ

(ಬಿ) ಭಾರತದ ನಿವಾಸಿಯಾಗಿರದ ಮತ್ತು ಭಾರತಕ್ಕೆ ಭೇಟಿ ನೀಡಿರುವ ಯಾರೇ ವ್ಯಕ್ತಿಯಿಂದ, ಗೌರವಧನವಾಗಿ, ಕೊಡುಗೆಯಾಗಿ ಅಥವಾ ಸಲ್ಲಿಸಿದ ಸೇವೆಗಳಿಗೆ ಅಥವಾ ಯಾವುದೇ ಕಾನೂನುಬದ್ಧ ಹೊಣೆಗಾರಿಕೆಯ ಈಡೇರಿಕೆಗಾಗಿ;

(ಸಿ) ಭಾರತದ ಹೊರಗಿನ ಯಾವುದೇ ಸ್ಥಳಕ್ಕೆ ಭೇಟಿ ನೀಡಿರುವಾಗ ಗೌರವಧನ ಅಥವಾ ಕೊಡುಗೆ ರೂಪದಲ್ಲಿ– ಕರೆನ್ಸಿ ನೋಟುಗಳು, ಬ್ಯಾಂಕು ನೋಟುಗಳು ಮತ್ತು ಟ್ರ್ಯಾವಲರ್ಸ್ ಚೆಕ್‌ಗಳ ರೂಪದಲ್ಲಿ ಗಳಿಸಿದ ವಿದೇಶೀ ವಿನಿಮಯದ ಹಣದಿಂದ ನಿವಾಸಿ ವಿದೇಶೀ ಕರೆನ್ಸಿ (ದೇಶೀಯ)

ಖಾತೆ ಎಂಬ ಒಂದು ವಿದೇಶೀ ಕರೆನ್ಸಿ ಖಾತೆಯನ್ನು ತೆರೆಯಬಹುದು, ಹೊಂದಿರಬಹುದು ಮತ್ತು ನಿರ್ವಹಿಸಬಹುದು; ಅಥವಾ

(ಡಿ) ಇದು ವಿದೇಶದಲ್ಲಿ ಪ್ರಯಾಣ ಮಾಡುವುದಕ್ಕಾಗಿ ಒಬ್ಬ ಅಧಿಕೃತ ವ್ಯಕ್ತಿಯಿಂದ ಅವನು ಗಳಿಸಿದ ವಿದೇಶೀ ವಿನಿಮಯದ ಖರ್ಚು ಮಾಡಿರದ ಹಣವನ್ನು ಪ್ರತಿನಿಧಿಸುತ್ತದೆ.

(2) ವಿದೇಶೀ ವಿನಿಮಯ ನಿರ್ವಹಣಾ (ಚಾಲ್ತಿ ಖಾತೆ ವ್ಯವಹಾರಗಳು) ನಿಯಮಗಳು, 2000ರ ಉಪಬಂಧಗಳ ಅನುಸಾರವಾಗಿ ಚಾಲ್ತಿ ಖಾತೆ ವ್ಯವಹಾರಗಳಿಗೆ ಮಾಡುವ ಸಂದಾಯಗಳನ್ನು ಮತ್ತು ವಿದೇಶೀ ವಿನಿಮಯ ನಿರ್ವಹಣಾ (ಅನುಮತೀಯ ಬಂಡವಾಳ ಖಾತೆ ವ್ಯವಹಾರಗಳು) ವಿನಿಯಮಗಳು, 2000ದ ಮೇರೆಗೆ ಅನುಮತಿಸಬಹುದಾದ ಬಂಡವಾಳ ಖಾತೆ ವ್ಯವಹಾರಗಳಿಗಾಗಿ ಮಾಡುವ ಸಂದಾಯಗಳನ್ನು ಈ ಖಾತೆಗೆ ಖರ್ಚು ಹಾಕತಕ್ಕದ್ದು.

(3) ಈ ಖಾತೆಯನ್ನು ಚಾಲ್ತಿ ಖಾತೆಯ ರೂಪದಲ್ಲಿ ನಿರ್ವಹಿಸತಕ್ಕದ್ದು ಮತ್ತು ಇದಕ್ಕೆ ಯಾವುದೇ ಬಡ್ಡಿ ದೊರೆಯತಕ್ಕದ್ದಲ್ಲ.

(4) ಖಾತೆಯಲ್ಲಿನ ಶಿಲ್ಕುಗಳ ಮೇಲೆ ಯಾವುದೇ ಗರಿಷ್ಠ ಮಿತಿ ಇರತಕ್ಕದ್ದಲ್ಲ."

ಸಹಿ/–
(ಕೆ.ಜೆ. ಉದೇಶಿ)
ಕಾರ್ಯ ನಿರ್ವಾಹಕ ನಿರ್ದೇಶಕ.